ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩—೮—೦

ತಾ. ೨—೧೨—೧೯೩೮.

ಸಂಪುಟ ೧೮] [ಸಂಚಿಕೆ ೨೩

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund.
1931	2,26,82,430	2,91,880	33,24,809
1933	3,07,98,435	3,54,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS, [Phone No. 8248.]

17

Bombay Life Building Udipi	Gautam Nivas Charni Road Girgaum, Bombay 4	Visweswarapuram Circle, Bangalore City	Puthiyara, Calicut	Car Street, Mangalore	Ottapalam S. Malabar.	Central Station Road, Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital .... Rs. 3,03,205/-
Reserves .... ,, 3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-52

V. R. Kamath, B. A., LL. B.,
Manager.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ। ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯವಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
Industrial Bank Ltd

52-27

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ಕಿನ್ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೆನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-17) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೨ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೬— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೨,೨೩೬—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೯೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೫,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-11

ಹೇಗಿದೆ ಲೆಕ್ಕ.

18 ನೆಯ ಶತಮಾನದಲ್ಲಿ ಜಡ್ಡೆಲ್ಯೆಯ ಒಕ್ಸ್‌ಟನ್ ಎಂಬಾತನಿದ್ದನು. ಆತನಿಗೆ ಬರವಣಿಗೆ ಎಂಬುದೇ ತಿಳಿಯದು. ಜ್ಞಾಪಕಶಕ್ತಿಯೂ ಕಡಿಮೆ. ಆದರೆ ಲೆಕ್ಕಗಳಲ್ಲಿ ಮಾತ್ರ ಕುಶಲನಾಗಿದ್ದನು. ಚರ್ಚಿನಲ್ಲಿ ಗುರುಗಳು ಪ್ರಾರ್ಥನೆ ಕಾಲದಲ್ಲಿ ಏನು ಹೇಳುತ್ತಿರೆಂಬುದು ತಿಳಿಯದಿದ್ದರೂ ಎಷ್ಟು ಮಾತುಗಳನ್ನು ನುಡಿದರು ಎಂಬ ವಿಷಯವನ್ನು ಹೇಳುತ್ತಿದ್ದನು.

—೦೦—

ಮೆಡಲೂ ಮತ್ತು ಪರಿಮಳ ದ್ರವ್ಯಗಳು.

ಪರಿಮಳ ದ್ರವ್ಯಗಳು ಔಷಧಗಳೆಂಬುದು ಯಾರ ಭಾವನೆಯಲ್ಲಿಯೂ ಇಲ್ಲ. ಅವೆಲ್ಲವೂ ಭೋಗ್ಯ ವಸ್ತುಗಳೆಂದು ತಿಳಿಯಲಾಗಿದೆ. ತಮ್ಮ ತಮ್ಮ ಸೌಂದರ್ಯ ಮತ್ತು ಮೋಹಕತೆಯನ್ನು ಹೆಚ್ಚಿಸಿಕೊಳ್ಳಲು ನಾಗರಿಕ ಮತ್ತು ಅನಾಗರಿಕ ಸ್ತ್ರಿವೃಂದವೆಲ್ಲವೂ ಪರಿಮಳವನ್ನು ಉಪಯೋಗಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಕೆಲವು ಪೌರಾತ್ಯ ಪುರುಷರೂ ಶೃಂಗಾರಕ್ಕೆಂದು ಉಪಯೋಗಿಸುವುದುಂಟು.

ಆದರೆ ಪರಿಮಳ ದ್ರವ್ಯಗಳಲ್ಲಿ ಅನೇಕ ವರ್ಷಗಳ ಸಂಶೋಧನೆಯಿಂದ ಅಮೇರಿಕದ ಪ್ರಾಜ್ಞರೊಬ್ಬರು ಮೆದುಳಿನ ದುರ್ಬಲತೆಗೆ ಸುಗಂಧಗಳು ಬಹಳ ಉತ್ತೇಜಕ ವಸ್ತುಗಳೆಂದು ಕಂಡು ಹಿಡಿದಿರುವರು. ಎಕೆಂದರೆ ಮೆದುಳಿಗೂ, ಘ್ರಾಣೇಂದ್ರಿಯಗಳಿಗೂ ನಿಕಟ ಸಂಬಂಧವಿದೆ.

'ವೈಯೋಲೆಟ್' ಪರಿಮಳವು ಅಧೈರ್ಯಸ್ಥರಿಗೆ ಧೈರ್ಯಕೊಡುವುದು. ಇದೇ ರೀತಿ ಇತರ ಪರಿಮಳಗಳೂ ಬಹಳ ಉಪಯೋಗಕರವಾಗಿವೆ.

—೦೦—

ತೆಳ್ಳಗಿನವರ ಬಾಳು.

ನಮ್ಮ ದೇಹದಲ್ಲಿನ ವಿಚಾರವನ್ನು, ಆರೋಗ್ಯ 'ಕಾರ್ಖಾನೆ'ಯಲ್ಲಿ ತಯಾರಾದ ಅನಾರೋಗ್ಯವಂತರು ಕಂಡು ಹಿಡಿದು, ಎಷ್ಟು ಕಾಲವಾಗಿದೆ. ದಿನವೊಂದಕ್ಕೆ ನಮ್ಮ ಹೃದಯವು, ಒಂದು ಲಕ್ಷ ಬಾರಿ ಹೊಡೆದುಕೊಂಡು, ಸುಮಾರು 2000 ಗೆಲನು ರಕ್ತವನ್ನು ಹೊರಗೂ ಒಳಗೂ ಚಲಿಸುವಂತೆ ಮಾಡುವುದಂತೆ. ಇದಕ್ಕಾಗಿ, ಭಯಪಡಬೇಕಾಗಿಲ್ಲ. ಒಮ್ಮೆ ಹೋದ ರಕ್ತವೇ ಪುನಃ ಬರುವುದರಿಂದ, ಅಷ್ಟು ಗೆಲನು ರಕ್ತ, ನಮ್ಮ ದೇಹದಲ್ಲಿರಬೇಕೆಂದು ತಿಳಿಯಬೇಡಿರಿ. ಈಗ ಇವರಲ್ಲಿ, ಜನರು ದಪ್ಪ ಹೆಚ್ಚಾದಷ್ಟು ಹೃದಯದ ಕೆಲಸ ಹೆಚ್ಚಾಗಿ, ದಪ್ಪಗಿನವರು ಸಾಯುವುದು ಸುಲಭವಾಗಿದೆಯಂತೆ. ಆದರೆ, ತೆಳ್ಳಗಿನವರು ಹೆಚ್ಚು ಕಾಲ ಬಾಳುವರೆಂದೂ ದೃಢವಿಲ್ಲ. ಬೇಕಷ್ಟಕ್ಕಿಂತ ಅಧಿಕ ತೆಳ್ಳಗಿರುವವರು ಬೇಗ ಸಾಯುವುದು ಅಪರೂಪವಾದರೂ, ಅವರದು ಧೈರ್ಯವಲ್ಲವಂತೆ. ಆದರೂ ಜೀವದ ಮೇಲಿರುವ ನಂಬಿಕೆ ತೋರದವರ ವಿಚಾರದಲ್ಲಿ ಹೆಚ್ಚು!

—೦೦—

ಕುಡಿಕರಿಗಾಗಿ.

ಬಜಾರಿನ ಹೆಂಡದಂಗಡಿಯನ್ನು ತೆಗೆಯಲು ಮನಸ್ಸಿಲ್ಲದ ನಮ್ಮ ನಗರ ಸಭಾ ಸದಸ್ಯರಿಗೆ, ಅಮೇರಿಕೆಯಿಂದ ಒಂದು ಉತ್ತಮ ಪದಂತಿ ಬಂದಿದೆ. ನ್ಯೂಯಾರ್ಕಿನ ಡಾ. ಜೋಸೆಫ್ ಹೆಗ್ಯೂಟ್ ಎಂಬವರು, ಕುಡಿದು ಮತ್ತರಾದವರ ಅಮಲನ್ನು ತೆಗೆಯಲು, ಒಂದು ಯಂತ್ರವನ್ನು ಕಂಡು ಹಿಡಿದಿದ್ದಾರೆ. ಮೂರ್ಗದ ಮೇಲೆ ಬೀಳಬೇಕಾದಷ್ಟು ಕುಡಿದರೂ ಕೂಡ, ಈ ಯಂತ್ರವು ಕುಡಿದವನ ಶ್ವಾಸಕೋಶಗಳಿಗೆ, ಕಾರ್ಬನ್ ಡೆಯಾಕ್ಸೈಡ್ ಬೆರೆಸಲಾದ ಗಾಳಿಯನ್ನು ಬಿಟ್ಟು—ಅಮಲನ್ನು ಹೊರಗೆಳೆಯುವುದು. ಪೂರ್ಣ ವಿರಾಮ ಹೊಂದುವ ರೀತಿಯಲ್ಲಿ ಬಿದ್ದವನನ್ನು, ಈ ರೀತಿಯ ಉಪಚಾರ 3 ತಾಸು ನಡೆಸಿ ಚೇತರಿಸಬಹುದಂತೆ.

—೦೦—

ವಿವಿಧ ವಿಚಾರ.

ಕೋಟೆಯನ್ನು ಕಟ್ಟಲು 4 ಗಂಟೆ ಸಾಕು!

ಒಂದು ಹೊಸ ವಿಧವಾದ ಕಾಂಕ್ರೀಟ್‌ನಿಂದ ಕೋಟೆ ಕೊತ್ತಲುಗಳನ್ನು ಎಷ್ಟು ಶೀಘ್ರದಲ್ಲಿ ಕಟ್ಟಬಹುದೆಂಬುದನ್ನು ಸ್ವೀಡನ್ ದೇಶದ ಪರಿಶೋಧಕನೊಬ್ಬನು ಪ್ರದರ್ಶನದ ಮೂಲಕ ತೋರ್ಪಡಿಸಿದ್ದಾನೆ. ಇವನ ಯೋಜನೆಯಂತೆ ಕೋಟೆಗಳನ್ನು ಕೇವಲ ನಾಲ್ಕು ಗಂಟೆಗಳ ಕಾಲದಲ್ಲಿಯೇ ಕಟ್ಟಿ ಮುಗಿಸಬಹುದಂತೆ. ಇದು ಸಹಜವಾದ ಕೋಟೆಗಳಿಷ್ಟೇ ಬಲವಾಗಿರುವುದಂತೆ.

—೦೦—

ಹಾಲೂಗೆಡ್ಡೆ ಸಿಪ್ಪೆ ತೆಗೆಯುವ ಯಂತ್ರ.

ಅಮೇರಿಕದಲ್ಲಿ ಎಲ್ಲಿ ನೋಡಿದರೂ ಯೂರೂ ಹಾಲೂಗೆಡ್ಡೆಯ ಸಿಪ್ಪೆಯನ್ನೇ ತೆಗೆಯರು. ಇವಕ್ಕೆ ಕಾರಣವೆಂದರೆ ಅಮೇರಿಕದ ಒಂದು ಕಂಪೆನಿಯವರು ಹಾಲೂಗೆಡ್ಡೆಯ ಸಿಪ್ಪೆಯನ್ನು ತೆಗೆಯುವ ಯಂತ್ರವನ್ನಿಟ್ಟು, ಸಿಪ್ಪೆ ತೆಗೆದು ಗೆಡ್ಡೆಗಳನ್ನೇ ಮಾರುತ್ತಿರುವುದು. ಹೀಗೆ ಲಕ್ಷಾಂತರ ಆಂಗಡಿಗಳಿಗೆ ಸರಪರಾಜು ಆಗುತ್ತಿದೆ. ಈ ಯಂತ್ರದಲ್ಲಿ ಒಂದು ಗಂಟೆಗೆ ಒಂಬತ್ತನ್ನಿನಂತೆ ಹಾಲೂಗೆಡ್ಡೆಯ ಸಿಪ್ಪೆಯನ್ನು ತೆಗೆಯಬಹುದಂತೆ. ಒಂದು ದೊಡ್ಡ ಕುಲುಮೆಯಲ್ಲಿ ಹಾಕಿ ಹಾಲೂಗೆಡ್ಡೆಯನ್ನು ಬೇಯಿಸಿ ಇವನ್ನು ಕೆಲವು 'ಸಿಲಿಂಡರು'ಗಳ ಮೂಲಕ ಹೋಗುವಂತೆ ಮಾಡಿದಾಗ ಇದರ ಸಿಪ್ಪೆ ಸುಲಿದು ಸಿದ್ಧವಾಗಿ ಬರುವುದಂತೆ!

—೦೦—

ಕೆಮ್ಮುತ್ತಲೇ ಬೆನ್ನು ಮೂಳೆ ಮುರಿಯಿತು!

ಕೆಲವರಿಗೆ, ಬಿಕ್ಕಾಗಲಿ, ಸೀನುಗಳಾಗಲಿ ಬಂದರೆ ಉಡಿದಾರವಾಗಲಿ, ಇಲ್ಲವೇ ನಿಕ್ಕರು—ಪರಾಯಿಗಳಾಡಿಯೂಗಲಿ ಕಿತ್ತು ಹೋಗುವುದುಂಟು. ಆದರೆ ಒಬ್ಬ ಪುಣ್ಯಾತ್ಮನು ಕೆಮ್ಮುವುದಕ್ಕೆ ಹೋಗಿ ಬೆನ್ನು ಮೂಳೆಯನ್ನೇ ಮುರಿದುಕೊಂಡ ಸೋಜಿಗದ ಸುದ್ದಿ ಯೂರಿಗೆ ತಾನೆ ಸೋಜಿಗವನ್ನುಂಟುಮಾಡಲಾರದು. ನ್ಯೂಜಿಲೆಂಡ್ ದೇಶದ ಲೆಲ್ಲಿಂಗ್‌ಟನ್ನಿನಲ್ಲಿ ಕೆಮ್ಮಿನಿಂದ ನರಳುತ್ತಿದ್ದ ಜಾನ್‌ನಿಖಲ್ಸನ್ ಎಂಬಾತನು ಬೆನ್ನು ಮೂಳೆಯನ್ನೇ ಮುರಿದುಕೊಂಡ ಸುದ್ದಿಯು ಅಲ್ಲಿಯ ಡಾಕ್ಟರುಗಳಿಗೆಲ್ಲಾ ಆಶ್ಚರ್ಯವನ್ನುಂಟುಮಾಡಿದೆ. ಕೆಮ್ಮಿಗೆ ಔಷಧಿ ಕೊಡಿ ಎಂದು ಕೇಳಿದರೆ, ಬೆನ್ನು ಮೂಳೆ ಪರೀಕ್ಷಿಸಲು ಹೊರಟ ಡಾಕ್ಟರನಂತೆ ಪೆಚ್ಚು ತಿಂದರಬೇಕು ಅವನ ಡಾಕ್ಟರು, ಅಲ್ಲವೆ?

—೦೦—

ಕಾಗದವಿಲ್ಲದ ಸಿಗರೇಟು.

ಇನ್ನು ಮೇಲೆ ಸಿಗರೇಟುಗಳಿಗೆ ಕಾಗದವೇ ಇರಬೇಕಾಗಿಲ್ಲ. ಇದಕ್ಕಾಗಿ ಒಂದು ಹೊಸ ಸೌಲಭ್ಯವನ್ನು ಕಂಡು ಹಿಡಿಯಲಾಗಿದೆ. ಹೊಗೇಸೊಪ್ಪಿನ ಎಲೆ ಮತ್ತು ತೊಟ್ಟುಗಳಿಂದ ಕಾಗದದ ಪೂರಣಿಯಲ್ಲಿ ವಿಶೇಷ ರೀತಿಯಲ್ಲಿ ಒಂದು ಪದಾರ್ಥವನ್ನು ತಯಾರಿಸುವರಂತೆ. ಅದು ಈಗ ಇರುವ ಸಿಗರೇಟ್ ಕಾಗದಕ್ಕಿಂತ ತೆಳುವಾಗಿರುವುದಂತೆ. ಅಲ್ಲದೆ ಇದು ಗಾಜಿನಂತೆ ದಾರ್ಶನಿಕ ವಸ್ತುವಾಗಿರುವುದು. ಇದು ಓರ್ವ ಹಂಗೇರಿಯದ ಸಂಶೋಧಕನ ಪ್ರಯತ್ನದ ಫಲವಾಗಿ ಅಮೇರಿಕದ ಸಂಯುಕ್ತ ಸಂಸ್ಥಾನದವರಿಂದ ವಿಶೇಷವಾದ ರೀತಿಯಲ್ಲಿ ಹೊಗಳಲ್ಪಟ್ಟಿದೆ. ಇದು ಎಲ್ಲ ಸಿಗರೇಟುಗಳಂತೆ ಬೇಗ ಉರಿದು ಹೋಗದೆ ನಿಧಾನವಾಗಿ ಬೇರೆ ಉರಿಯುವುದಂತೆ!

—೦೦—

ಬಣ್ಣ ಬದಲಾಯಿಸುವ ಹರಿವಾಣಗಳು!

ಲ್ಲಂಡನಿನಲ್ಲಿ ನಡೆದ ಪ್ರಾಚೀನ ವಸ್ತು ಪ್ರದರ್ಶನಾಲಯದಲ್ಲಿ ಚೀನಾದೇಶದ ಕೆಲವು ಗಾಜಿನ ಹರಿವಾಣಗಳು ಪ್ರದರ್ಶಿಸಲ್ಪಟ್ಟಿದ್ದುವು. ಇವು ಅನೇಕ ಶತಮಾನಗಳ ಹಿಂದಿನವುಗಳೆಂದು ಅವುಗಳ ಯಜಮಾನ್ರರು ಹೇಳುತ್ತಿರುವರು.

ಅವುಗಳ ಒಂದು ವಿಚಿತ್ರ ಗುಣವೆಂದರೆ ವಿಷ ಮಿಶ್ರಿತ ಆಹಾರವನ್ನು ಅವುಗಳ ಮೇಲೆ ಬಡಿಸಿದರೆ, ಕೂಡಲೆ ಅವುಗಳ ಬಣ್ಣವು ಬದಲಾಗುವುದು!

—೦೦—

ದಿನ ಹೋಗುತ್ತಾ ಕುಳ್ಳನಾಗುತ್ತಿರುವ ಮನುಷ್ಯ!

ಸ್ವೀಡನಿನಲ್ಲೊಬ್ಬ ಮನುಷ್ಯನಿದ್ದಾನೆ. ಆತನು ದಿನ ಹೋಗುತ್ತಾ ಕುಳ್ಳನಾಗುತ್ತಿರುವನೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಈ ವಿಚಿತ್ರ ವ್ಯಕ್ತಿಯು ಪ್ರಪಂಚದ ರಸಜ್ಞರೆಲ್ಲರಿಗೂ ಆತ್ಯಾಶ್ಚರ್ಯವನ್ನುಂಟುಮಾಡಿರುವನು.

ಎರಡು ವರ್ಷಗಳ ಹಿಂದೆ ತನ್ನ ಎತ್ತರದಲ್ಲಾತನು 4 ಅಂಗುಲಗಳನ್ನು ಕಳೆದು ಕೊಂಡನು. ಮತ್ತು ದಿನ ಹೋಗುತ್ತಾ ಇನ್ನೂ ಕುಳ್ಳನಾಗುತ್ತಿದ್ದನು. ಈಗ ಆತನು ಕೋಪನ್‌ಹೇಗನಿನ ಆಸ್ಪತ್ರೆಯೊಂದರಲ್ಲಿರುವನು. ದಿನ ಹೋಗುತ್ತಾ ಆತನು ಕುಳ್ಳನಾಗುತ್ತಿರಲು ಕಾರಣವೇನೆಂಬುದನ್ನು ಕಂಡು ಹಿಡಿಯಲು ವೈದ್ಯರೆಲ್ಲರೂ ಅಂದಿನಿಂದ ಪ್ರಯತ್ನಿಸುತ್ತಿರುವರು.

—೦೦—

ಪರರ ಜಾಗದಲ್ಲಿ ಮನೆಯನ್ನು ಕಟ್ಟಿ ತನ್ನದೆಂದು ಸಾಧಿಸಿದ ವೀರ.

ಸರ್ಬಿಯಾ ಎಂಬಲ್ಲಿ ಮುನ್ಸಿಪಾಲಿಟಿಯ ಜಾಗದಲ್ಲಿ ರಾತ್ರಿ ಹಗಲಾಗಬೇಕಾದರೆ ಮಿಲೊಡ್ ನಿಶಿಕ್ ಎಂಬಾತನು ಒಂದು ಮನೆಯನ್ನು ತನ್ನ ಗೆಳೆಯರ ಸಹಾಯದಿಂದ ಕಟ್ಟಿದನು. ಮುನ್ಸಿಪಾಲಿಟಿಯವರು ತಮ್ಮ ಜಾಗವನ್ನು ಕೇಳಿದರು. ಆದರೆ ಆ ಜಾಗವನ್ನು ಆತನಿಗೇ ಬಿಟ್ಟುಬಿಡಬೇಕೆಂಬ ನಿರ್ಧಾರವು ಕೋರ್ಟಿನಲ್ಲಾಯಿತು. ಕಾರಣ, ಆ ದೇಶದ ಹಳೆಯದೊಂದು ಕಾನೂನಿನ ಪ್ರಕಾರ, ಮುಳುಗಿದ ಸೂರ್ಯನು ಉದಯಿಸಬೇಕಾದರೆ ಆತನು ತನ್ನ ಕೆಲಸವನ್ನೆಲ್ಲಾ ಮಾಡಿ ಮುಗಿಸಿದುದರಿಂದ, ಆ ಜಾಗದ ಮೇಲೆ ಆತನ ಹಕ್ಕು ಸಾಬೀತವಾಯಿತು.

—೦೦—

ಹಳೆಯ ನೆನಪು.

ಇತ್ತೀಚೆಗೆ ಶಾಂತಿ ದೇವಿ ಎಂಬ ಹುಡುಗಿಯೊರ್ವಳು ತನ್ನ ಪೂರ್ವಜನ್ಮದ ಸ್ಮರಣೆಯನ್ನು ಹೇಳಿ ಜನರಲ್ಲಿ ಆಶ್ಚರ್ಯವನ್ನುಂಟುಮಾಡಿದ್ದಳು. ಈಗ ಇಂಥ ಇನ್ನೊಂದು ಸುದ್ದಿ ಬಂದಿದೆ. ಜಾನ್ಸಿ ಜಿಲ್ಲೆಯ ಮಹಾರೌಣ ಎಂಬ ಗ್ರಾಮದಲ್ಲಿ ಮೊನ್ನೆ ತಾನೆ ಓರ್ವಳು ೨೦ ವರ್ಷ ಪ್ರಾಯದ ಹುಡುಗಿಯು ಒಂದು ದಿನ ಥಕ್ಕನೆ ಅಳಹತ್ತಿದಳಂತೆ. ತನ್ನ ಹಿಂದಿನ ಜನ್ಮದ ಮಕ್ಕಳು ಮತ್ತು ಗಂಡನು ಇದ್ದಲ್ಲಿಗೆ ಕೊಂಡುಹೋಗಬೇಕೆಂದು ಹೆತ್ತವರೊಡನೆ ಹಟಹಿಡಿದಳು. ಅವಳೇ ತೋರಿಸಿದ ಸಮೀಪದ ಗ್ರಾಮದ ದೊಡ್ಡ ಮನೆಬಾಗಿಲಿಗೆ ಅವಳನ್ನು ಒಯ್ಯಲಾಯಿತು. ಅಲ್ಲಿ ಆಕೆ ತನ್ನ 'ಮಗನ' ಹೆಸರು ಕೂಗಿ ಕರೆದಳಂತೆ. ಆ ಮಗನು ಹೊರಬಂದೊಡನೆ ಅವಳವನನ್ನು ಅಪ್ಪಿ ಮುದ್ದಾಡಿದಳು! ಅವಳ ಹೋದ ಜನ್ಮದ ಗಂಡನಿಗೆ ನಂಬಿಕೆ ಬರಲಿಲ್ಲ. ಇದು ಸುಳ್ಳು ಮೋಸ, ಎಂದನಂತೆ. ಕಡೆಗೆ ಆ ಹುಡುಗಿ ಅದೇ ಮನೆಯಲ್ಲಿ ಹಿಂದೆ ಒಂದು ನಿಧಿಯನ್ನು ಹೂತಿಟ್ಟ ಸ್ಥಳವನ್ನು ಹುಡುಕಿ ತೋರಿಸಿದಳು; ನಿಧಿಯನ್ನು ಅಗೆದು ತೆಗೆದರು! ಆ ಮೇಲೆ ಅವಳ ಮಾತನ್ನು ಎಲ್ಲರೂ ನಂಬಬೇಕಾಯಿತು.

—೦೦—

ಕೊಡಗು

ಡಿಸೆಂಬರ್ ತಾರೀಕು ೨ನೇ ಶುಕ್ರವಾರ ೧೯೩೭.

ಸಿಬ್ಬಂದಿ ಖೋತೆ.

ಕೊಡಗಿನ ಸರ್ಕಾರದವರು ಕೆಲವು ವರ್ಷಗಳಿಂದೀಚೆಗೆ ಆಡಳಿತೆಯ ಇಲಾಖೆಗಳ ಸಿಬ್ಬಂದಿಯನ್ನು ಹೆಚ್ಚಿಸುತ್ತಾ ಬಂದದ್ದಲ್ಲದೆ, ಈ ಮೊದಲೇ ಇದ್ದ ತಲೆ ಭಾರದ ಆಡಳಿತ ಕ್ರಮದ ಖರ್ಚನ್ನು ಕಡಿಮೆ ಮಾಟದ್ದರಿಂದ ಬಜ್ಜೆಟನ್ನು ಸಮಗಟ್ಟಲು ಸಾಧ್ಯವಾಗದೆ ಕಷ್ಟದಲ್ಲಿ ಬಿದ್ದರು. ಆದ ಕಾರಣ ಇಂಡಿಯಾ ಸರ್ಕಾರದವರು ಆದಾಯ ವೆಚ್ಚವನ್ನು ಸರಿಪಡಿಸಲು ಒಬ್ಬ ಫೈನಾನ್ಸ್ ಆಫೀಸರನ್ನು ನೇಮಿಸಿದರು. ಅವರು ತಯಾರಿಸಿದ ವರದಿಯನ್ನು ಜನರ ತಿಳುವಳಿಕೆ ಬಗ್ಯೆ ಪ್ರಕಟಿಸದೆ ಗುಟ್ಟಾಗಿ ಇಟ್ಟುಕೊಂಡು, ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಪಟ್ಟ ಉದ್ಯೋಗಗಳ ಖೋತೆಯ ವಿಚಾರವಲ್ಲಿ ಆ ವರದಿಯ ಸಿಫಾರಸ್ಸುಗಳನ್ನು ಜಾರಿಗೆ ತರುವ ಕ್ರಮವನ್ನು ಚೀಫ್ ಕಮಿಷನರವರು ಕೈಕೊಂಡಿರುವರು. ಯಾವ್ಯಾವ ಹುದ್ದೆಗಳನ್ನು ತೆಗೆದುಹಾಕಬೇಕೆಂದು ಗಜೆಟಿನಲ್ಲಿ ಹೊರಪಡಿಸಿದ್ದರ ಸಾರಾಂಶವನ್ನು ಕಳೆದ ವಾರ ಪ್ರಕಟಿಸಲಾಗಿತ್ತು. ಈಗ ಸದರಿ ಉದ್ಯೋಗದಲ್ಲಿರುವ ಮಹನೀಯರುಗಳಿಗೆ–ಮೂರು ತಿಂಗಳಲ್ಲಿ ತಮ್ಮ ಹುದ್ದೆಯು ಖಂತ್ಯಗೊಳಿಸಲ್ಪಡಬಹುದೆಂದು ನೋಟೀಸು ಕೊಡಲಾಗಿದೆಯೆಂದು ತಿಳಿಯಬರುತ್ತದೆ. ಇದರಿಂದ ಸಂಬಂಧಪಟ್ಟ ಉದ್ಯೋಗಸ್ಥರಲ್ಲಿ ಹಾಹಾಕಾರವು ಎದ್ದಿದೆ.

ತಲೆಭಾರ ಸರ್ಕಾರದ ದೊಡ್ಡ ದೊಡ್ಡ ಹುದ್ದೆಗಳನ್ನು ತೆಗೆದುಹಾಕಬೇಕೆಂಬುವುದೇ ಎಲ್ಲರ ಅಭಿಪ್ರಾಯವಾಗಿತ್ತು. ಆದುದರಿಂದ ಫೈನಾನ್ಸ್ ಆಫೀಸರ ಸಿಬ್ಬಂದಿ ಖೋತೆಯ ಸಲಹೆಗಳನ್ನು ತಿಳಿಯಲು ಎಲ್ಲರೂ ಕುತೂಹಲದಿಂದಿದ್ದರು. ಈ ವಿಚಾರ ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ತುಂಬಾ ಚರ್ಚೆ ನಡೆಯಿತು. ಇಂಡಿಯಾ ಸರ್ಕಾರದವರು ಈ ವರದಿಯ ಮೇಲೆ ತಮ್ಮ ಹುಕುಮನ್ನು ಮಾಡದೆ ಇರುವದರಿಂದ ಸದರಿ ವರದಿಯು ಗುಟ್ಟಾಗಿ ಇಡಲ್ಪಟ್ಟಿದೆಯೆಂದೂ, ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಪಟ್ಟ ಹುದ್ದೆಗಳ ಖೋತೆಯ ವಿಚಾರದಲ್ಲಿ ಕೌನ್ಸಿಲಿನಲ್ಲಿ ನಡೆದ ಚರ್ಚೆಯು ಗಮನಕ್ಕೆ ತೆಗೆದುಕೊಳ್ಳಲಾಗುವುದೆಂದೂ ಸರ್ಕಾರದ ಮೆಂಬರರು ಹೇಳಿದ್ದರು. ಆದರೆ ಸರ್ಕಾರದವರು ತಮ್ಮ ಈ ಮಾತನ್ನು ನಡಿಸಿಕೊಡುವಂತೆ ತೋರುವುದಿಲ್ಲ.

ದೊಡ್ಡ ಹುದ್ದೆಗಳ ಖೋತೆಯ ವಿಚಾರದಲ್ಲಿ ಇಂಡಿಯಾ ಸರ್ಕಾರವ ಹುಕುಂ ಬರುವ ಮುಂಚೆ ಚಿಕ್ಕ ಉದ್ಯೋಗಗಳಲ್ಲಿ ಖೋತೆ ಮಾಡುವುದು ಎಂದೂ ನ್ಯಾಯವಲ್ಲ. ಜನರ ಪ್ರತಿನಿಧಿಗಳ ಈ ಸೂಚನೆಯನ್ನು ಗಣನೆಗೆ ತೆಗೆದುಕೊಳ್ಳದೆ ಅಧಿಕಾರಿಗಳು ಕೆಳ ನೌಕರರಿಗೆ ನೋಟೀಸು ಕೊಟ್ಟದ್ದು ವಿಷಾದಕರ. ನಿಜವಾಗಿಯೂ ಎಲ್ಲಿ ಖೋತೆ ಆಗಬೇಕೋ ಅಲ್ಲಿ ಖೋತೆ ಮಾಡದೆ, ತಪ್ಪು ತುದಿಯಲ್ಲಿ ಖೋತೆ ಮಾಡುತ್ತಿರುವ ಸರ್ಕಾರವ ವರ್ತನೆಯನ್ನು ಎಷ್ಟು ಖಂಡಿಸಿದರೂ ಸಾಲದು. ಅಲ್ಪ ಸಂಬಳದ ಕೆಳ ನೌಕರರನ್ನು ಮನೆಗೆ ಕಳುಹಿಸುವುದರಿಂದ ನಿರುದ್ಯೋಗತನವು ಹೆಚ್ಚುವುದಲ್ಲದೆ, ಸರ್ಕಾರಕ್ಕೆ ಹೆಚ್ಚಿನ ಉಳಿತಾಯವೇನೂ ಆಗುವಂತಿಲ್ಲ. ಇದರ ಬದಲು ಸಾವಿರಗಟ್ಲೆ ಸಂಬಳ ತಿನ್ನುವ ಉದ್ಯೋಗಗಳನ್ನು ಪ್ರಥಮತಃ ಖಜಾನೆ ಮಾಡಿದರೆ ಸರ್ಕಾರದ ಖರ್ಚು ಬಹಳ ಮಟ್ಟಿಗೆ ಕಡಿಮೆಯಾಗುವುದು. ಚಿಕ್ಕ ಉದ್ಯೋಗಗಳ ಖೋತೆ ವಿಚಾರದಲ್ಲಿ ಅಧಿಕಾರಿಗಳು ಕೈಕೊಂಡಿರುವ ರೀತಿಯೂದರೂ ಸರಿಯೂದದ್ದಾಗಿ ಕಂಡುಬರುವುದಲ್ಲ. ಹುದ್ದೆಗಳನ್ನು ಕಡಿಮೆ ಮಾಡುವಾಗ್ಯೆ 30 ವರ್ಷಗಳಿಗಿಂತ ಹೆಚ್ಚು ಸರ್ವಿಸಾದವರನ್ನು ಮೊದಲು ತೆಗೆದು, ಸಾಲದಿದ್ದರೆ 25 ವರ್ಷ ಸರ್ವಿಸಾದವರನ್ನು ಅಂದರೆ ಪೂರ್ತಿ ಪೆನ್ಶನಿಗೆ ಅರ್ಹರಾದವರನ್ನು ತೆಗೆಯುವುದು ನ್ಯಾಯವಾಗಿತ್ತು; ಹೀಗೆ ಮಾಡಿದ್ದರೆ ಅತೃಪ್ತಿಗೆ ಕಾರಣವಿತ್ತಿಲ್ಲ. ಈ ವಿಚಾರ ಕೌನ್ಸಿಲು ಮೀಟಿಂಗಿನಲ್ಲಿ ಕೂಲಂಕುಶವಾಗಿ ಚರ್ಚಿಸಲ್ಪಟ್ಟಿತ್ತು. ಇದಕ್ಕೆ ಅಧಿಕಾರಿಗಳು ಕಿವಿ ಕೊಡದೆ, ಮೂವತ್ತು ವರ್ಷಗಳಿಗಿಂತ ಹೆಚ್ಚು ಸರ್ವಿಸು ಮಾಡಿದವರನ್ನು ಖಿಟ್ಟು, 15 ರಿಂದ 20 ವರ್ಷಗಳ ವರ್ಷಗಳ ವರೆಗೆ ಸರ್ವಿಸು ಮಾಡಿದವರಿಗೆ ನೋಟೀಸು ಕೊಟ್ಟಿರುವುದು ದೊಡ್ಡ ಅನ್ಯಾಯವೆಂದೇ ಹೇಳಬೇಕಾಗಿದೆ. ಇದರಿಂದ ಹಲಸರಲ್ಲಿ ಅಸಮಾಧಾನ ಉಂಟಾಗದಿರದು. ಸರ್ಕಾರದವರು ಯಾವ ನಿರ್ಧಿಷ್ಟ ತತ್ವದ ಮೇರೆ ನೋಟೀಸು ಕೊಟ್ಟಿರುವರೋ ತಿಳಿಯದು. ಅಲ್ಲದೆ ವ್ಯವಸಾಯಗಾರರಿಗೆ ಬಹು ಉಪಯುಕ್ತವಾಗಿರುವ ನಾಡು ಖಜೇರಿ ಯೂನಿವರ್ಸಲನ್ನೂ ತೆಗೆಯಕೂಡದೆಂದೂ, ದನೇ ದಿನೇ ಕೆಲಸ ಹೆಚ್ಚುತ್ತಿರುವ ಬಡ ಪಟೇಲರುಗಳ ಸಂಬಳ ಕಡಿಮೆಮಾಡಕೂಡದೆಂದೂ ಶಾಲಾ ಫೀಜು ಹೆಚ್ಚಿಸಕೂಡಂದೂ ಕೌನ್ಸಿಲಿನಲ್ಲಿ ಬಹುಮತದವರ ತೀರ್ಮಾನವಾಗಿವೆ. ಸರ್ಕಾರದವರು ಇವುಗಳಿಗೆ ಒಂದಿಷ್ಟೂ ಬೆಲೆ ಕೊಡದೆ, ತಮ್ಮ ಮನಬಂದಂತೆ ವರ್ತಿಸುತ್ತಿರುವುದು ವ್ಯಸನಕರ. ಸರ್ಕಾರದವರು ಜನರ ಅಭಿಪ್ರಾಯವನ್ನು ಹೀಗೆ ನಿರಾಕರಿಸುತ್ತಾ ಬರುವುದು ಉಚಿತವಲ್ಲ. ಇನ್ನು ದೀರ್ಘ ಕಾಲ ಹೀಗೆ ಮೂಡಲೂರ್ರು. ಜನರು ತಮ್ಮ ಅಭಿಪ್ರಾಯದಂತೆ ಆಡಳಿತ ನಡೆಸುವ ಕಾಲವು ದೂರವಾಗಿಲ್ಲ. ಇದನ್ನು ಅರಿತುಕೊಂಡಾದರೂ ಅಧಿಕಾರಿಗಳು ತಮ್ಮ ನ್ಯಾಯವಲ್ಲದ ರೀತಿಗಳನ್ನು ಬದಲಾಯಿಸುವರಾಗಿ ನಂಬುತ್ತೇವೆ.

ರೆವಿನ್ಯು ಮ್ಯಾನ್ಯುವಲ್ಲಿನ ತಿದ್ದುಪಡಿ.

ಕೊಡಗು ಲ್ಯಾಂಡ್ ರೆವಿನ್ಯು ರೆಗ್ಯುಲೇಶನ್ ಮತ್ತು ಅದಕ್ಕೆ ಸಂಬಂಧಪಟ್ಟ ನಿಬಂಧನೆಗಳು ರೆವಿನ್ಯೂ ಮ್ಯಾನುವಲ್ಲಿನಲ್ಲಿ ಅಡಕವಾಗಿವೆ. ಈ ರೆಗ್ಯುಲೇಶನೂ ಮತ್ತು ನಿಬಂಧನೆಗಳೂ ಜನರ ಅಭಿಪ್ರಾಯ ಕೇಳದೆ ಸರ್ಕಾರಿ ಅಧಿಕಾರಿಗಳಿಂದ ಮಾಡಲ್ಪಟ್ಟವಾಗಿವೆ. ಇವುಗಳಿಂದ ವ್ಯವಸಾಯಗಾರರ ಹಿತಕ್ಕೆ ತುಂಬಾ ಅಡಚಣೆ ಆಗಿರುವುದರಿಂದ ಇವುಗಳನ್ನು ಜನರ ಹಿತಕ್ಕನುಸಾರವಾಗಿ ತಿದ್ದುಪಡಿ ಮಾಡಬೇಕೆಂಬ ಕೂಗು ದೇಶದಲ್ಲಿ ದೀರ್ಘ ಕಾಲದಿಂದಿದೆ.

ಸರ್ಕಾರದವರು ಈ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಈಗ ಕೊಡಗು ಗಜೆಟಿನಲ್ಲಿ ಕೆಲವು ಕರಡು ನಿಬಂಧನೆಗಳನ್ನು ಪ್ರಕಟಿಸಿರುವರು. ಈ ಕರಡು ತಿದ್ದುಪಡಿಗಳನ್ನು ನೋಡಿದರೆ, ಅವು ಮೊದಲಿನ ನಿಬಂಧನೆಗಳಿಗಿಂತಲೂ. ಹೆಚ್ಚು ರೈತರಿಗೆ ಹಾನಿಕರವಾದವೆಂದು ಸ್ವಲ್ಪವೂ ಸಂಶಯವಿಲ್ಲ ಹೇಳಬಹುದು. ರೈತರ ಪ್ರಯೋಜನಕ್ಕೆಂದು ಇಟ್ಟಿರುವ ಪೈಸಾರಿ ಜಾಗದ ಉಪಯೋಗವು ಕಾದಟ್ಟ ಕಾಡಿಗಿಂತಲೂ (ರಿಸರ್ವ್ ಫಾರೆಸ್ಟ್) ಕಷ್ಟವಾಗುವುದು. ಇದರ ಮಟ್ಟಿಗೆ ರೆವಿನ್ಯು ಅಧಿಕಾರಿಗಳಿರುವ ಅಧಿಕಾರವೆಲ್ಲವೂ ಫಾರೆಸ್ಟ್ ಮುಖ್ಯ ಅಧಿಕಾರಿಗಳಿಗೇ ಸೇರುವುದು. ಭೂಮಿ ಮತ್ತು ಜಾಗದ ವಿಚಾರದಲ್ಲಿ ಈಗ ರೈತರು ಸ್ವಲ್ಪ ತೊಂದರೆಯಿಂದ ಪಡಕೊಳ್ಳಬಹುದಾದ ಅನುಕೂಲತೆಗಳು ಈ ಕರಡು ನಿಬಂಧನೆಗಳು ಜಾರಿಗೆ ಬಂದರೆ ಎಷ್ಟು ಕಷ್ಟಪಟ್ಟರೂ ಸುಲಭ ಸಾಧ್ಯವಾಗಲಾರವು. ಈ ಕರಡು ತಿದ್ದುಪಡಿಗಳನ್ನು ಓದುತ್ತಾ ಹೋದರೆ ಅವುಗಳ ಭೀಕರ ಸ್ವರೂಪವು ಗೋಚರಿಸಾಗದಿರದು. ಜನರು ಸಕ್ಕಾಲದಲ್ಲಿ ಎಚ್ಚತ್ತುಗೊಳ್ಳಬೇಕಾಗಿದೆ. ಡಿಸೆಂಬರ್ ಆಖೈರೊಳಗೆ ಇವುಗಳಿಗಿರುವ ಆಕ್ಷೇಪಣೆಯ ತಿದ್ದುಪಡಿಗಳನ್ನು ಚೀಫ್ ಕಮಿಷನರವರಿಗೆ ತಿಳಿಸಬೇಕೆಂದಿದೆ. ಆದ ಕಾರಣ ಜನರು ಅಲ್ಲಲ್ಲಿ ಸಭೆ ಸೇರಿ, ಈ ಕರಡು ತಿದ್ದುಪಡಿಗಳನ್ನೆಂದಿಗೂ ಮಂಜೂರು ಮಾಡಬಾರದೆಂದೂ, ರೆವಿನ್ಯು ಮ್ಯಾನ್ಯುವಲನ್ನು ತಿದ್ದುಪಡಿ ಮಾಡಲು ಉದ್ಯೋಗಸ್ಥರಲ್ಲದವರ ಅಂದರೆ ಒಳ್ಳೇ ಅನುಭವವೂ, ತಿಳುವಳಿಕೆಯೂ ಇರುವ ಜಮೀನ್ದಾರರ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಬೇಕೆಂದೂ ಚೀಫ್ ಕಮಿಷನರವರನ್ನು ಕೇಳಿಕೊಳ್ಳತಕ್ಕದ್ದು. ಈ ವಿಚಾರದಲ್ಲಿ ದೇಶದ ಉದ್ದಗಲಕ್ಕೂ ಚಳವಳಿ ನಡಿಸಬೇಕಾಗಿದೆ. ದೇಶೀಯರು ಈಗ ಸುಮ್ಮನಾದರೆ ರೈತರ ಸ್ಥಿತಿಯು ಮೆತ್ತಷ್ಟೂ ಕಷ್ಟವಾಗುವುದು.

ಓರಿಯಂಟಲ್ ಜೀವವಿಮೆ ಕಂಪೆನಿ.

ಭಾರತದ ಪ್ರಮುಖ ವಿಮೆ ಸಂಸ್ಥೆಯೆನಿಸಿ, ತನ್ನ ಆ ಸ್ಥಳವನ್ನು ಕಾದಿರಿಸಲು ಪ್ರತಿ ವರ್ಷ ಅಖಂಡ ಉದ್ಯಮವನ್ನು ಸಾಧಿಸುತ್ತಾ ಜಗತ್ತಿನ ವಿಮೆ ಪ್ರಪಂಚದಲ್ಲಿ ಒಂದು ಗಣ್ಯ ಸ್ಥಾನವನ್ನು ಪಡೆದು ಜನತೆಯ ಆದರಣೆಯನ್ನು ಪಡೆದಿರುವ ಈ ಕಂಪೆನಿಯ 1937 ನೇ ಡಿಸಂಬರ್ ಅಂತ್ಯಕ್ಕೆ ಪೂರ್ತಿಯಾದ ವಾರ್ಷಿಕ ವರದಿಯಿಂದ ಇದರ ಪ್ರಗತಿಯು ಹೇಗಿರುವುದೆಂಬುದು ವ್ಯಕ್ತವಾಗದಿರದು.

ಈ ವರದಿಯ ವರ್ಷದಲ್ಲಿ 55,228 ವಿಮೆ ಖರಾರುಗಳ 998 ಲಕ್ಷ ರೂಪಾಯಿಯ ಹೊಸ ಉದ್ಯಮವನ್ನು ಸಾಧಿಸಿದೆ. ಈ ವರ್ಷದ ವಿಮೆ ಕಂತಿನ ವಸೂಲಾತಿ ಹಣವು ಕಳೆದ ವರ್ಷಕ್ಕಿಂತ 28 ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಕಳೆದ ವರ್ಷ 57¾ ಲಕ್ಷದ ವಿಮೆ ಖರಾರುಗಳ ಹಣ ಮರಣದ ಪ್ರಯುಕ್ತ ಕೊಡಲ್ಪಟ್ಟವು. ಆದರೆ ಈ ವರ್ಷ ಬರೇ 1¼ ಲಕ್ಷ ಮಾತ್ರ ಅದಕ್ಕಿಂತ ಹೆಚ್ಚಾಗಿದೆ. ಅವಧಿ ಪೂರೈಸಿದ ವಿಮೆ ಪತ್ರಗಳ ಬಾಪ್ತು ಕಳೆದ ವರ್ಷ 62 ಲಕ್ಷ ಹಣ ಕೊಡಲ್ಪಟ್ಟಿತ್ತು ಈ ವರ್ಷ 6¾ ಲಕ್ಷ ಹೆಚ್ಚಿದೆ. ಮರಣದ ಪ್ರಯುಕ್ತ ಕೊಡಲ್ಪಟ್ಟ ವಿಮೆ ಖರಾರುಗಳ ಸಂಖ್ಯೆಯೂ ಶೇಕಡ 48.7 ರಷ್ಟಾಗಿರುವದರಿಂದ ಕಂಪೆನಿಯು ಸ್ಥಾಪಿತವಾದಂದಿನಿಂದ ಈ ವರ್ಷವೇ ಇದು ಇಷ್ಟು ಕಮ್ಮಿಯಾಗಿರುವದೆಂಬುದು ಸಂತೋಷದ ಸಂಗತಿ.

ಈ ವರ್ಷದ ಅಮೋಘ ಉದ್ಯಮದ ಪ್ರಯುಕ್ತ ಕಂಪೆನಿಯ ನಿಧಿಯು 21¼ ಕೋಟಿಗೆ ತಲಪಿದೆ.

1937 ನೇ ವರ್ಷಕ್ಕೆ ಕಂಪೆನಿಯ ಶೇರುದಾರರ ಪ್ರತಿ ಶೇರಿಗೆ 125 ರೂಪಾಯಿಗಳ ಡಿವಿಡೆಂಡ್ ಕೊಡಲು ಡೈರೆಕ್ಟರ್ರುಗಳು ತೀರ್ಮಾನಿಸಿರುವರು. ಹೆಚ್ಚೇಕೆ? ಕಂಪೆನಿಯು ಇಡೀ ಭಾರತಕ್ಕೆ ವಿಮೆಯ ಬೆಳಕನ್ನು ಹರಡಿ, ಅನೇಕ ಬಡ ಕುಟುಂಬಿಗಳಿಗೆ ಆಶ್ರಯ ಧಾತ್ರುವಾಗಿ ವಿಮೆ ಪ್ರಪಂಚದಲ್ಲಿ ಮುಂದುವರಿಯುತ್ತಿದೆ. ಇದರ ಈ ವರ್ಷದ ವರದಿಯು ಎಲ್ಲ ವಿಧಗಳಿಂದಲೂ ಕಂಪೆನಿಯ ಅಭಿವೃದ್ಧಿಯನ್ನು ವ್ಯಕ್ತಪಡಿಸುತ್ತಿದೆ. ಹೊಸ ಉದ್ಯಮ, ಉತ್ಪತ್ತಿ, ಕಡಿಮೆ ಖರ್ಚು, ಸಮುಚಿತ ಡಿವಿಡೆಂಡು ಈ ಎಲ್ಲಾ ವಿಚಾರಗಳಲ್ಲೂ ವರದಿಯು ಶ್ಲಾಘನೀಯವಾದದ್ದಿದೆ. ಹೀಗೆಯೇ ಮುಂದಕ್ಕೂ ಕಂಪೆನಿಯು ಉತ್ತಮವಾದ ಅಭಿವೃದ್ಧಿಯನ್ನು ಪಡೆದು ವಿಮೆ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದು ಭಾರತದ ದವಳ ಕೀರ್ತಿಯನ್ನು ಪ್ರದರ್ಶಿಸಲೆಂದು ಹಾರೈಸುತ್ತೇವೆ.

ವಿನಂತಿ.

ಹುತ್ರಿ ಹಬ್ಬದ ರಜೆಗಾಗಿ ''ಕೊಡಗು'' ಪತ್ರಿಕೆಯ ಬರುವ ವಾರದ ತಾ. 9–12–38 ರ ಸಂಚಿಕೆಯು ಪ್ರಕಟಿಸಲ್ಪಡುವುದಿಲ್ಲವೆಂದು ವಾಚಕ ಮಹಾಶಯರಿಗೆ ಈ ಮೂಲಕ ತಿಳಿಸಲಾಗಿದೆ.

'ಕೊಡಗು' ಆಫೀಸು, ಮೇನೇಜರು.
2–12–38.

ಒಳದೇಶ.

ಈ ವರ್ಷ ಕರ್ನಾಟಕ ಪ್ರಾಂತ್ಯದಲ್ಲಿ 1,72,112 ಪ್ರಾಥಮಿಕ ಸದಸ್ಯರು ಕಾಂಗ್ರೆಸಿಗೆ ಸೇರಿರುವರೆಂದೂ, ಕಳೆದ ವರ್ಷ 1,19,258 ಆಗಿತ್ತೆಂದೂ ಅಂದರೆ ಈ ವರ್ಷ 52,855 ಹೆಚ್ಚಿಗೆ ಆದಂತಾಯಿತೆಂದೂ, ಈ ವರ್ಷ ಕೊಡಗಿನಲ್ಲಿ 2593 ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿರುವರೆಂದೂ ಕಳೆದ ವರ್ಷ 1091 ಆಗಿತ್ತೆಂದೂ, ಈ ವರ್ಷ 1502 ಹೆಚ್ಚಿಗೆ ಆದಂತಾಯಿತೆಂದೂ ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ತಿಳಿಸಿರುತ್ತಾರೆ.

ಮಡಿಕೇರಿ.

ಇಲ್ಲಿ ಯೂಲಕ್ಕೆ ಮಣಕ್ಕೆ ರೂ. 29 ಕ್ರಯವಿದೆಯೆಂದೂ, ಕಾಫಿ ಖಂಡಿಗೆ ರೂ. 105 ಕ್ರಯವಿದೆಯೆಂದೂ ತಿಳಿಯುತ್ತೇವೆ.

ಕಳೆದ ತಿಂಗಳಲ್ಲಿ ರೇಂಜರ್ಸ್ ಸಿಲೆಕ್ಷನ್ ಪರೀಕ್ಷೆಗೆ ಕೂತವರ ಪೈಕಿ ಶ್ರೀ ಮಾದಪಂಡ ಕಾರ್ಯಪ್ಪನವರು ತೇರ್ಗಡೆಯಾಗಿರುವರಾಗಿ ವರ್ತಮಾನ.

ಹಣ ಸಾಲ ಕೊಡುವ ಸಾಹುಕಾರರುಗಳ ಮಸೂದೆಯನ್ನು ಕುರಿತ ಉಪಕಮಿಟಿಯ ಮೀಟಿಂಗು ಈ ತಾ. 3 ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯಲಿಕ್ಕಿದೆ.

ಇಲ್ಲಿಯ ಕೆಲವು ಮಹನೀಯರಿಂದ ಸ್ಥಾಪಿಸಲ್ಪಟ್ಟಿರುವ 'ಕೋಹಿನೂರ್ ಟಾಕೀಸ್' ಕಳೆದ ತಾರೀಕು 23 ರಿಂದ ವಾಕ್ಚಿತ್ರಗಳನ್ನು ಪ್ರದರ್ಶಿಸುತ್ತಲಿದೆ.

ಸಿಬ್ಬಂದಿ ಖೋತೆಯ ಪರಿಣಾಮವಾಗಿ ಪ್ರತೀ ಇಲಾಖೆಯಲ್ಲಿಯೂ ಕೆಲವರಿಗೆ ಕೆಲಸದಿಂದ ಫೆಬ್ರವರಿ ತಾರೀಕು ಅಂತ್ಯದಲ್ಲಿ ನಿವೃತ್ತರಾಗಬೇಕೆಂದು ನೋಟೀಸು ಜಾರಿಮಾಡಿರುವರಾಗಿ ತಿಳಿಯಬರುತ್ತದೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಇನ್ಸ್‌ಪೆಕ್ಟರಾದ ಶ್ರೀ ಡಿ. ನರಸಿಂಹರವರು ಕೊಡಗು ಕಾಂಗ್ರೆಸ್ ಕಮಿಟಿಯ ಲೆಕ್ಕಗಳನ್ನು ಪರಿಶೋಧಿಸಲು ತಾ. 7ರಲ್ಲಿ ಇಲ್ಲಿಗೆ ಬರುವರು.

ಗಜೆಟಿನಲ್ಲಿ ಪ್ರಕಟಿಸಿರುವ ರೆವಿನ್ಯೂ ಮ್ಯಾನುವಲಿನ ಕಡಿಮೆ ತಿದ್ದುಪಡಿಯನ್ನು ವಿರೋಧಿಸಲು ಇಲ್ಲಿ ತಾ. 1–12–38 ರಲ್ಲಿ ಶ್ರೀ ಸಿ. ಎಸ್. ಮುತ್ತಣ್ಣ, ಬಾರ್–ಆಟ್ ಲಾರವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನಡೆಯಿತು.

ಈ ತಾರೀಕು 3 ನೇ ಶನಿವಾರ 5 ಗಂಟೆಗೆ ಇಲ್ಲಿಯ ವೇದಾಂತ ಸಂಘದವರು ಶ್ರೀಮಾನ್ ಓಡ್ಲಮನೆ ಆತ್ಮಾರಾಮಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಗೀತಾ ಜಯಂತ್ಯುತ್ಸವವನ್ನು ಆಚರಿಸುವರೆಂದೂ, ಎಲ್ಲರಿಗೂ ಸುಸ್ವಾಗತವಿದೆಯೆಂದೂ ತಿಳಿಯುತ್ತೇವೆ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಆಡಿಟರವರಾದ ಶ್ರೀ ಗುರುರಾವು ಧಾರವಾಡಕರ್ ಮತ್ತು ಕಟ್ಟರಾವ್ ಇವರು ತಾರೀಕು 25 ರಲ್ಲಿ ಇಲ್ಲಿಗೆ ಬಂದು ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಲೆಕ್ಕ ಆಡಿಪೂಯಿಸಿ ತಾ. 28 ರಲ್ಲಿ ಮಂಗಳೂರಿಗೆ ಹೋದರು.

ಬೆಂಗಳೂರು ಕಂಟೋನ್‌ಮೆಂಟಿನಲ್ಲಿ ರೆಸಿಡೆನ್ಸಿ ಸರ್ಜನರಾದ ಕರ್ನಲ್ ಹ್ಯಾನ್ಸ್‌ರವರು ಒಂದು ತಿಂಗಳು ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿರುವುದರಿಂದ ಕೊಡಗಿನ ಸಿವಿಲ್ ಸರ್ಜನರಾದ ಕ್ಯಾಪ್ಟನ್ ಜಿ. ಪಿ. ಚಾರ್ಲಿವುಡ್‌ರವರು ಒಂದು ತಿಂಗಳ ವರೆಗೆ ಬೆಂಗಳೂರು ರೆಸಿಡೆನ್ಸಿ ಸರ್ಜನರಾಗಿಯೂ, ವೀರಾಜಪೇಟೆ ಆಸ್ಪತ್ರೆಯ ಆಸಿಸ್ಟೆಂಟ್ ಸರ್ಜನರಾದ ಮೆ. ತೀತಿರ ಮೇದಪ್ಪ ಯಂ. ಬಿ. ಬಿ. ಯಸ್. ರವರು ಮಡಿಕೇರಿ ಆಸ್ಪತ್ರೆಯ ರೆಸಿಡೆನ್ಸಿ ಮೆಡಿಕಲ್ ಆಫೀಸರಾಗಿ ಸಿವಿಲ್ ಸರ್ಜನರ ಹುದ್ದೆಯ ಚಾರ್ಜಿನಲ್ಲಿರುವಂತೆಯೂ ಈ ತಾ. 1 ರಲ್ಲಿ ಪೆರ್ಗಾಯಿಸಲ್ಪಟ್ಟಿರುವರು.

ಮೂರ್ನಾಡು.

ಕೊಡಗು ಗಜೆಟಿನಲ್ಲಿ ಪ್ರಕಟವಾಗಿರುವ ರೆವಿನ್ಯೂ ಮ್ಯಾನುವಲಿನ ಕರಡು ತಿದ್ದುಪಡಿಯನ್ನು ವಿರೋಧಿಸಲು ತಾ. 24 ರಲ್ಲಿ ಇಲ್ಲಿ ಒಂದು ಸಾರ್ವಜನಿಕ ಮೀಟಿಂಗು ಶ್ರೀ ಚೌರಿರ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ, ನಡೆಯಿತು.

ವೀರಾಜಪೇಟೆ.

ಇಲ್ಲಿ ಬತ್ತ ಗಾಡಿಗೆ ರೂ. 47 ಕ್ರಯ ವಿರುವದಾಗಿ ತಿಳಿಯುತ್ತೇವೆ.

ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗು ಈ ತಾ. 14 ರಲ್ಲಿ ಇಲ್ಲಿ ಜರಗುವುದು.

ಈ ತಾ. 17 ಮತ್ತು 18 ರಲ್ಲಿ ಇಲ್ಲಿ ನಡೆಯುವ ಸೆಂಟ್ರಲ್ ಬ್ಯಾಂಕು ಮಹಾಸಭೆ ಮತ್ತು ಸಹಕಾರ ಸಮ್ಮೇಳನವಲ್ಲಿ ನಮ್ಮ ಪ್ರದರ್ಶನವಿದೆಯೆಂದೂ ತಿಳಿಯುತ್ತೇವೆ.

'ಕೊಡಗು' ಕಂಪೆನಿಯ ಪಾಲುದಾರರ ವಾರ್ಷಿಕ ಮಹಾ ಸಭೆಯು ಇಲ್ಲಿ ಕಳೆದ ತಾ. 26 ರಲ್ಲಿ ನಡೆದು ನಿವೃತ್ತಿ ಹೊಂದಿದ ಡೈರೆಕ್ಟರುಗಳ ಬದಲಿಗೆ ಮೆ. ಗಳಾದ ಮೇರಿಯಂಡ ಮಾದಪ್ಪನವರು, ನಡಿಕೇರಿಯಂಡ ಸೋಮಯ್ಯನವರು, ಮುಕ್ಕಾಟಿರ ಅಪ್ಪಣ್ಣನವರು, ಉದಿಯಂಡ ಅಣ್ಣಯ್ಯನವರು ಮತ್ತು ಯಂ. ಯಂ. ಸಿದ್ದೀಕರವರು ಚುನಾಯಿಸಲ್ಪಟ್ಟಿರುವರು.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗೊಂದು ಈ ತಾರೀಕು 14 ನೇ ಬುಧವಾರ 1 ಗಂಟೆಗೆ ಇಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಅರಮೇರಿ ಗ್ರಾಮದಲ್ಲಿರುವ ಹರಿಜನ ಶಾಲೆಯ ಮಹಾಸಭೆಯು ಈ ತಾರೀಕು 13 ನೇ ಮಂಗಳವಾರ ಸದರಿ ಶಾಲೆಯಲ್ಲಿ ಶ್ರೀಮಾನ್ ಪಳಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿಯೂ, ಆದೇ ದಿನ ಶ್ರೀ ಕೆ. ಕಾಳಯ್ಯನವರು ಅಲ್ಲಿ ಹರಿಕಥೆಯನ್ನು ಮಾಡುವರಾಗಿಯೂ ತಿಳಿಯುತ್ತೇವೆ.

ಪೊನ್ನಂಪೇಟೆ.

ಹುತ್ತುಗಟ್ಟುನಾಡು ಬಾಳೆಲೆಯಲ್ಲಿ ಡಿಸ್ಪೆನ್ಸರಿ ಬೋರ್ಡು ಆಸ್ಪತ್ರೆಯೊಂದು ಈ ತಾ. 12 ರಲ್ಲಿ ತೆರೆಯಲ್ಪಡುವದೆಂದೂ, ಮೆ. ಚೇಂದ್ರಿಮಾಡ ಅಪ್ಪಯ್ಯನವರು ಅಲ್ಲಿಗೆ ಡಾಕ್ಟರಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿಯಬರುತ್ತದೆ.

ವರ್ತಮಾನ ಸಂಗ್ರಹ.

ವರ್ಗಾವರ್ಗಿ

ಸುಂಟಿಕೊಪ್ಪಲು ಸಿವಿಲ್ ಆಸ್ಪತ್ರೆಯ ಡಾಕ್ಟರಾದ ಶ್ರೀ ಜೀರಂಡ ಅಚ್ಚಯ್ಯನವರು ನಾಲ್ಕು ತಿಂಗಳು ರಜೆಯಲ್ಲಿ ಹೋಗುವರಿಂದೂ, ಅವರ ಬದಲಿಗೆ ಶ್ರೀ ಪಟ್ಟಡ ಕಾರ್ಯಪ್ಪನವರನ್ನೂ, ರಜೆಯಲ್ಲಿದ್ದ ಶ್ರೀ ನೆಲ್ಲಿಸುಕ್ಕಳ ದೇವಯ್ಯನವರನ್ನು ಶ್ರೀಮಂಗಲಕ್ಕೂ ವರ್ಗಾಯಿಸುವರೆಗೆ ತಿಳಿಯುತ್ತೇವೆ.

ಹಿಂದೂದೇಶ.

ಆಸಾಮಿನ ಮಂತ್ರಿ ಮಂಡಲವು ತನ್ನ ತಿಂಗಳ ಸಂಬಳವನ್ನು ಕಡಿಮೆಮಾಡಿಕೊಂಡು ಹಾಗೆ ಉಳಿಸಿದ ಮೊತ್ತದಲ್ಲಿ ರೂ. 2,500 ನ್ನು ಗೋಲ್ಪಾರೆ ಪ್ರಾಂತ್ಯದ ನೆರೆಹಾವಳಿಯ ನಿಧಿಗೆ ದಾನಮಾಡಿದೆ.

ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಹೈದರಾಬಾದು ಸರ್ಕಾರದವರು ಇದು ವರೆಗೂ ತಮ್ಮ ದೇಶದೊಳಗೆ ಪ್ರವೇಶಿಸಲು ನಿರ್ಭಂಧವನ್ನು ಹಾಕಿದ್ದರು. ಆದರೆ ಈಗ ರಾಜ ಅಥಿತಿಗಳಾಗಿ ದಯಮಾಡಿಸಿ ರಾಜಕೀಯ ಪರಿಸ್ಥಿತಿಗಳನ್ನು ಸರಿಪಡಿಸಬೇಕೆಂದು ಕೋರಿರುವರು.

ಆಸಾಮಿನ ಎಸೆಂಬ್ಲಿಯಲ್ಲಿ ಉಂಟಾದ ಎರಡು ಪಕ್ಷಗಳಲ್ಲಿ ಕಾಂಗ್ರೆಸ್ ವಿರೋಧ ಪಕ್ಷದವರು ತಾ. 23 ನೇ ರಾತ್ರಿ ಕಾಂಗ್ರೆಸ್ ಪಕ್ಷದವರ ಕೂಡ ಹೊಡೆದಾಟ ಮಾಡಿದರು. ಆದರಲ್ಲಿ ಹಿರೇಂದ್ರ ಚಕ್ರವರ್ತಿಯವರು ಭಾಗವಹಿಸಿದ್ದರು. ಆ ಕಾರಣ ಅವರನ್ನು ಸೆರೆ ಹಿಡಿದು ಒಯ್ದಿದ್ದಾರೆ. ಚಕ್ರವರ್ತಿಯವರು ಎಸೆಂಬ್ಲಿ ಮೆಂಬರರಿರುತ್ತಾರೆ. ಸಭ್ಯಕ್ಕೆ ಅವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ.

ಇಜಿಪ್ತಿನ ಮಾಜೀ ಪ್ರಧಾನರಾದ ನಾಹಸ್ ಪಾಶ ಇವರು ಹಿಂದುಸ್ತಾನದಲ್ಲಿ ಜರುಗಲಿರುವ ಕಾಂಗ್ರೆಸ್ ಅಧಿವೇಶನದ ಸಮಾರಂಭಕ್ಕೆ ಬರಬೇಕಾಗಿ ಪಂ. ಜವಾಹರಲಾಲರು ಬಿನ್ನವಿಸಿದ್ದರಷ್ಟೇ. ಅವರ ಆಮಂತ್ರಣಕ್ಕೆ ಮಾನ್ಯತೆ ಕೊಟ್ಟು ಹಿಂದುಸ್ಥಾನಕ್ಕೆ ಅವರು ಬರಬಹುದೆಂದು ಊಹಿಸಲಾಗಿದೆ. ಬರುವಾಗ್ಗೆ ಅವರು ತಮ್ಮ ಪುತ್ರರನ್ನು ಜೊತೆಗೆ ಕರೆತರಬಹುದೆಂದು ತಿಳಿಯುತ್ತದೆ.

ವಿದೇಶ.

ಫ್ರಾನ್ಸಿನಲ್ಲಿ ದೊಡ್ಡ ಮುಷ್ಕರವೊಂದು ಸದ್ಯದಲ್ಲೇ ಆರಂಭಿಸಿದೆ. ಈಗಿನ ಸರ್ಕಾರವು ರಾಜಿನಾಮೆ ಕೊಡಬೇಕೆಂದು ಫ್ರಾನ್ಸಿನ ದೊಡ್ಡ ರಾಜಕೀಯ ಪಂಗಡವಾದ ಸೋಶಿಯಲಿಸ್ಟ್ ತಂಡವು ಮಂಜೂರುಮಾಡಿದೆ.

ಮಿ. ಚೇಂಬರ್‌ಲೇನರ ಧೋರಣೆಯನ್ನು ಒಪ್ಪದವರ ಒಂದು ಪಾರ್ಟಿಯನ್ನು ಎರ್ಪಡಿಸಿಕೊಂಡು, ತನ್ಮೂಲಕ ಈಗಿನ ಬ್ರಿಟಿಷ್ ಪ್ರಧಾನರನ್ನು ಕೆಳಗೆ ಹಾಕಬೇಕೆಂದು ಮಾಜಿ ವಿದೇಶೀ ಸೆಕ್ರೆಟರಿಗಳಾದ ಮಿ. ಈಡನ್ನರವರು ಬಹಳ ಸಾಹಸಮಾಡುತ್ತಿದ್ದಾರೆ. ಪರಿಣಾಮವು ನಿರೀಕ್ಷಣೀಯವಾಗಿದೆ.

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಇತರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.

ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗರೆತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಸೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು.	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಅಕ್ಟಿನ ಮೇರೆ ತೀರ್ಮಾನ:—ಈ ಖಾನೂನು ಮೇರೆ ತೀರ್ಮಾನ ಮಾಡತಕ್ಕದ್ದಿದ್ದ ರೂ, 2 ಲಕ್ಷವನ್ನು ಪೂರ್ತಿಯೊಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52-25) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

5

ಎಂಬ್ರೋಸಿಯೂ,

ಸಾವಿರಾರು ಹೆಂಗಸರ ಕಾಯಿಲೆಗಳನ್ನು ನಿವಾರಿಸಿದೆ.

ಹೆಸರುವಾಸಿಯೂದ ಡಾಕ್ಟರುಗಳಿಂದಲೂ, ಉಪಯೋಗಿಸಿ ತೃಪ್ತಿಗೊಂಡವರಿಂದಲೂ ಎಂಬ್ರೋಸಿಯೂವು ಹೆಂಗಸರ ರೋಗಗಳಿಗೆ ಹೆಸರುಗೊಂಡಿದೆ.

ಬಾಟ್ಲಿಗೆ ರೂ. 2-0-0.
ಸಣ್ಣ ಬಾಟ್ಲಿಗೆ ಆ. 0-15-0.
ಸೋಲ್ ಏಜೆಂಟ್-ವಿ. ರಾಮು & ಕೋ.
ಬೋಂಬೆ 2.

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೆ ತಿಳಿಸುವುದೇನೆಂದರೆ-

ಪೊನ್ನಂಪೇಟೆ ನಾಡು ಕಿರುಗೂರು ಗ್ರಾಮದ ಪೌತಿ ಪದಾರ್ಥಿ ಕೃಷ್ಣಯ್ಯನವರು ಅನೇಕ ಲೇವಾದೇವಿ ಮಾಡುತ್ತಾ ಸದರಿಯವರಿಗೆ ಲಿಖಾವಟ್ಟುಗಳ ಮೇಲೂ ಡಿಕ್ರಿಗಳ ಮೇಲೂ ಹೊರಗಿನಿಂದ ಉದ್ರೆಯು ಬರತಕ್ಕದಿದೆ. ಇವರು ಪೌತಾಗುವ ಮುಂಚೆ ತಾ. 17-2-1936ರ ರಜಿಸ್ಟ್ರಿ ವಿತಾನಾಮೆ ಪ್ರಕಾರ ಅವರ ಬಾಬ್ತು ಸಮಸ್ತ ಸ್ಥಿರ ಚರ ಸೊತ್ತುಗಳು, ಲೇವಾದೇವಿಗಳು ವಗೈರೆ ಅವರ ಹೆಂಡತಿಯೂದನನಗೂ, ನನ್ನ ಮರುದಿನಕ್ಕೆ ಅವರ ಮಗ ಪೊಮ್ಮಯ್ಯನಿಗೂ ಸಹ ಹಕ್ಕಾಗಿರತಕ್ಕಂದೆ ಬದಾಗಿ ವಿತಾ ಬರೆದು ರಿಜಿಸ್ಟ್ರಿ ಮಾಡಿರುತ್ತಾರೆ. ಈ ಹಕ್ಕಿನ ಪ್ರಕಾರ ನಾನು ಮುಂದರಿಸುತ್ತಿದ್ದೇನೆ. ಹೀಗಿರುವುದರಿಂದ ನನ್ನ ಗಂಡನ ಬಾಕಿದಾರರು ಅವರಿಂದ ಸಲ್ಲತಕ್ಕ ಬಾಕಿಯನ್ನು ನನಗಲ್ಲದೆ ಇತರ ಯಾರಿಗೂ ಸಲ್ಕೆ ಕೊಡಕೂಡದು. ಹಾಗೆ ಕೊಟ್ಟಲ್ಲು ನ್ಯಾಯವಾದ ಹಕ್ಕುದಾರಳಾದ ನನಗೆ ಬಾಧಿಸುವುದಿಲ್ಲ. ನ್ಯಾಯವಾದ ಹಕ್ಕುದಾರಳಾದ ನನಗೇನೇ ಸಲ್ಕೆ ಕೊಟ್ಟು ರಸೀತಿ ಪಡೆಯತಕ್ಕದ್ದು ಎಂಬ ದಾಗಿ ಸೂಚಿಸೋಣಾಗಿರುತ್ತೆ.

ಕಿರುಗೂರು,
16-11-38. } ಪದಾರ್ಥಿ ದೇವಮ್ಮ.

ನೋಟೀಸು.

ಕೊಡಗು ಜಮೀನ್ದಾರರ ಸಂಘ,
ಮಡಿಕೇರಿ, ತಾ. 1-12-38.

ಕೊಡಗು ಜಮೀನ್ದಾರರ ಸಂಘದ ಕ್ಕೆ ಮೀಟ ಮೀಟಿಂಗೊಂದು ಈ ತಾ. 14 ರಲ್ಲಿ ಬೆಳಗ್ಗೆ 11 ಗಂಟಿಗೆ ವೀರಾಜಪೇಟೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲು ಕೂಡುವದು. ಅದಕ್ಕೆ ನೀವು ತಪ್ಪದೆ ಬರಬೇಕಾಗಿ ಕೋರಿಕೆ.

1. ಲೆಕ್ಕಗಳು.
2. ರವಿನ್ಯು ಮೆನ್ಯೂವಲಿನ ತಿದ್ದುಪಡಿ ಕರಡು ನಿಬಂಧನೆಗಳು.
3. ಸ್ಕೂಲ್ ಫೀಜು ಏರಿಸುವಿಕೆ.
4. ನಾಡುಖಚೇರಿ ತೆಗೆಯುವಿಕೆ.
5. ವೈಸರಾಯರಿಗೆ ಡೆಪ್ಯುಟೇಶನ್.
6. ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯಗಳು.

ಐ. ಪಿ. ಕಾರ್ಯಪ್ಪ,
(ಗೌರವ ಕಾರ್ಯದರ್ಶಿ.)

ಮೂರಾಟಕ್ಕೆ.

ಜೇನು ಪೆಟ್ಟಿಗೆಯ ಒಳಗಿಡುವ ಚೌಕಟ್ಟುಗಳು-8 ದೊಡ್ಡವು-8 ಚಿಕ್ಕವುಗಳು ಬರೇ ಒಂದು ರೂಪಾಯಿಗೆ ಮೂರಲ್ಪಡುತ್ತೆ.

ಎರಿಗಳು ಜೇನು ತುಂಬಿದ್ದು ಬೆಳ್ಳಗಿದ್ದರೆ ಒಳ್ಳೇ ಬೆಲೆಗೆ ಕೊಂಡುಕೊಳ್ಳಲಾಗುವುದು.

ಜೇನು ಮತ್ತು ಮೇಣ ಸಹಕಾರಿ ಸಂಘ, ವೀರಾಜಪೇಟೆ. 4-4

ಧಾತುಪುಷ್ಟಿ ಲೇಹ.

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಪ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಜೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ ಪ್ರಭು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [16]

ಒಂದು ಸಕಾಲದ ಎಚ್ಚರಿಕೆ.

ದೈನಿಕ ಜೀವನದಲ್ಲಿ ಒಬ್ಬನು - ತಮ್ಮ ಜೀವನಮಾನವನ್ನು ಸಾಗಿಸಲು ಹೋರಾಡುತ್ತಿರುವ, ನಿರಾಶ್ರಿತ ವಿಧವೆಯರ ಮತ್ತು ಮಕ್ಕಳ ಪರಿಸ್ಥಿತಿಯನ್ನು ಆಗಾಗ್ಗೆ ಕಾಣಬಹುದು. ಏಕೆಂದರೆ ಅವರು ಯಾರ ಆಶ್ರಯದಲ್ಲಿದ್ದರೋ, ಅವರು ತಮಗೆ ಅನಿವಾರ್ಯವಾಗಿ ಬರಬಹುದಾದ 'ಮೃತ್ಯು' ವಿನ ಮರುದಿನಕ್ಕೆ ತಮ್ಮ ಆಶ್ರಯದಲ್ಲಿರುವವರಿಗೆ ತಕ್ಕ ಜೀವನೋಪಾಯವನ್ನು ಮಾಡುವಷ್ಟು ಮುಂದಾಲೋಚನೆ ಉಳ್ಳವರಾಗಿರಲಿಲ್ಲ.

ನಿಮ್ಮ ಮರುದಿನಕ್ಕೆ "ನಿಮ್ಮ ಆಶ್ರಯಿ"ಗಳು ಸ್ವತಂತ್ರ ಜೀವನ ನಡೆಸುವಂತೆ ನೀವು ನಿಶ್ಚಯ ಪಡಿಸಿರುವಿರೋ? ಇಲ್ಲವಾದರೆ, ಸಮಯ ಕಳೆಯದೆ

"ಓರಿಯಂಟಲ್ ಪೋಲಿಸಿ"

ಯನ್ನು ಪಡೆದು ನಿಮ್ಮ ನೆಚ್ಚಿನವರ ಆರ್ಥಿಕ ಸ್ವಾತಂತ್ರವನ್ನು ಸ್ಥಿರಪಡಿಸಿರಿ.

20 ರೂಪಾಯಿಯ ಮೂಲಧನದ ಹತ್ತಿರ

ಓರಿಯಂಟಲ್

ನಿಂದ ಈ ವರೆಗೆ ಇದರ ವಿಮಾದಾರರ ಪೈಕಿ ಸಾವಿರಾರು ಜನರಿಗೆ ಅವರ ತೊಂದರೆಯ ಸಮಯದಲ್ಲಿ ಸಹಾಯ ಮಾಡಲ್ಪಟ್ಟಿದೆ.

ಜಾರಿಯಲ್ಲಿರುವ ಪೋಲಿಸಿಗಳು

ರೂ. **73** ಕೋಟಿಗೆ ಮಿಗಿದಿದೆ.

1937 ನೇ ಡಿಸಂಬರ್ 31 ಕ್ಕೆ ಇದ್ದ ನಿಧಿ.

ರೂ. **21** ಕೋಟಿಯ ಮೇಲೆ.

ಕ್ರಮೇಣ ಪ್ರತಿಯೊಬ್ಬನು ವಿಮಾಮಾಡಲಶಕ್ತನಾಗುವನು.
ಯಾವಾಗ ಎಂದು ಹೇಳಲು ಯಾರಿಗೂ ಸಾಧ್ಯವಾಗಲಾರದು.

ಆದುದರಿಂದ ವಿಳಂಬ ಮಾಡದಿರಿ. ಮುಂದಾಲೋಚನೆಯಿರುವ ಜನತೆಯು ಪ್ರತಿವರ್ಷ ವಿಮಾಮಾಡ್ಡುತ್ತಿರುವ

ಓರಿಯಂಟಲ್‌ನಲ್ಲಿ ವಿಮೆ ಮಾಡಿರಿ.

ಓರಿಯಂಟಲ್ ಸರಕಾರೀದ ಭರವಸೆಯುಳ್ಳ ಲೈಫ್ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್.

ಹೆಡ್ ಆಫೀಸು:—ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ನಮ್ಮ ಮನರಂಜಕ ಪೋಲಿಸಿಗಳ ಹೆಚ್ಚಿನ ಮಾಹಿತಿಗೆ ದಯವಾಗಿ ಬರೆಯಿರಿ:—

ದ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.
ಅಥವ ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು, ಮೈನ್ ರೋಡು, ಮಡಿಕೇರಿ, (ಕೊಡಗು).

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 20-11-38 ರಲ್ಲು ಬೆಳಗ್ಯೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಂ ದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಅಧ್ಯಕ್ಷರು) 2. ಸಿ ಯಂ. ಭೀಮಯ್ಯನವರು, 3. ಬಿ. ಎ. ಬೆಳ್ಯಪ್ಪನವರು, 4. ಯಂ. ಯಂ. ಬೆಳ್ಯಪ್ಪನವರು, 5. ದಿ. ಬ. ಕೆ. ಚಂಗಪ್ಪನವರು, 6. ಎಂ. ಸಿ. ದೇವಯ್ಯನವರು, 7. ಕೆ. ಸಿ. ಕರುಂಬೈಯ್ಯನವರು, 8. ಐ. ಪಿ. ಕಾರ್ಯಪ್ಪನವರು, 9. ಪಿ. ಜಿ. ಮುದ್ದಯ್ಯನವರು, 10. ಹೆಚ್. ಎಂ. ಪುಪ್ಪಣ್ಣನವರು, 11. ಯಂ. ಎಸ್. ಸೋಮಯ್ಯನವರು ಮತ್ತು 12. ಪಿ. ಜಿ. ಐಯ್ಯಪ್ಪನವರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರವರೂ ಮತ್ತು ಸೀನಿಯರ್ ನಾನ್‌ಕ್ರೆಡಿಟ್ ಇನ್‌ಸ್ಪೆಕ್ಟರರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರು ಹಾಜರಾಗಿದ್ದರು. ಮೆ. ಗಳಾದ 1. ರಾ. ಬ. ಪಿ. ದೇವಯ್ಯನವರು, 2. ಸಿ. ಎ. ಮಂದಣ್ಣನವರು (ಟ್ರೆಜರರ್) ಮತ್ತು 3. ಐ. ಸಿ. ಸುಬ್ಬಯ್ಯನವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ನ್ನು ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಜೋರ್ಡಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಆಕ್ಟೋಬರ್ ತಿಂಗಳ ಜಮಾ ಮತ್ತು ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು.

ಹಿಂದಳ ಶಿಲ್ಕು	15,794-8-11
ಸದರಿ ತಿಂಗಳಲ್ಲಿ ವಸೂಲಿ	12,199-5-3
ಜುಮ್ಲ	27,993-14-2
ಆ ತಿಂಗಳಲ್ಲಿ ಖರ್ಚು	10,775-7-0
ಬಾಕಿ ಶಿಲ್ಕು	17,218-7-2

4. 1938 ನೇ ಇಸವಿ ಜೂನ್ 30 ಕ್ಕೆ ಅಖೈರಾದ ಆ ವರ್ಷದ ಸೆಂಟ್ರಲ್ ಬ್ಯಾಂಕಿನ ಕೆಲಸ ಕಾರ್ಯಗಳ ವಿಷಯ ರಿಜಿಸ್ಟ್ರಾರವರಿಂದ ಬಂದ ಆಡಿಟ್ ವರದಿಯನ್ನು ಓದಿ ರಿಕಾರ್ಡು ಮಾಡಲಾಯಿತು.

5. 1937-1938ನೇ ಇಸವಿಯ ಬ್ಯಾಂಕಿನ ಕೆಲಸ ಕಾರ್ಯಗಳ ವಿಷಯ ಡೈರೆಕ್ಟರುಗಳು ತಯಾರಿಸಿದ ಕರಡು ರಿಪೋರ್ಟನ್ನು ಓದಿ ಮಂಜೂರ್ಮಾಡಲಾಯಿತು.

6. 1938-1939 ನೇ ಇಸವಿಯ ಬ್ಯಾಂಕಿನ ಕರಡು ಬಜ್ಜೆಟನ್ನು ಓದಿ ಮಂಜೂರ್ಮಾಡಲಾಯಿತು.

7. ಬ್ಯಾಂಕಿನ ಜನರಲ್ ಬಾಡಿ ಮೀಟಿಂಗಿನಲ್ಲಿ ಚರ್ಚಿಸಲಿಕ್ಕೋಸ್ಕರ ಸಂಘಗಳಿಂದಲೂ ಮತ್ತು ಬಿಡುಮೆಂಬರುಗಳಿಂದಲೂ ಕಳುಹಿಸಲ್ಪಟ್ಟ ವಿಷಯಗಳನ್ನು ಆಲೋಚಿಸಿ ಅವುಗಳ ಪೈಕಿ ಅವಶ್ಯವಿರುವ ವಿಷಯಗಳನ್ನು ಮಾತ್ರ ಜನರಲ್‌ಬಾಡಿ ಮೀಟಿಂಗಿನಲ್ಲಿ ಚರ್ಚಿಸಲು ತೆಗೆದುಕೊಳ್ಳಲಾಯಿತು.

8. ಮಾಜಿ ಗೌರವ ಕಾರ್ಯದರ್ಶಿ ಮೆ. ಯಂ. ಯಂ. ಬೆಳ್ಯಪ್ಪನವರು ಹೊಂದಿಕೊಂಡ ಬೋನಸ್ಸನ್ನು ವಾಪ್ಸು ಪಡಿಸುವ ವಿಷಯ ನೇಮಿಸಿದ ಸಬ್ ಕಮಿಟಿಯವರ ಪೈಕಿ ಇಬ್ಬರು ಮೆಂಬರುಗಳ ರಿಪೋರ್ಟನ್ನು ಓದಲಾಯಿತು.

ಸದರಿ ಬೋನಸನ್ನು ಹೊಂದಿಕೊಂಡ ಮಹನೀಯರಾದ ಮೆ. ಯಂ. ಯಂ. ಬೆಳ್ಯಪ್ಪನವರು ಆದನ್ನು ವಾಪ್ಸು ಬ್ಯಾಂಕಿಗೆ ಸಲ್ಲಿಸಬೇಕೆಂದು ಮೆ. ಐ. ಪಿ. ಕಾರ್ಯಪ್ಪನವರು ಸೂಚಿಸಿದರು. ಮೆ. ಕೆ. ಸಿ. ಕರುಂಬೈಯ್ಯನವರು ಅನುಮೋದಿಸಿದರು.

ಸಬ್ ಕಮಿಟಿ ಮೆಂಬರುಗಳ ರಿಪೋರ್ಟನ ನಖಲನ್ನು ಈ ಮೊದಲೇ ಕಳುಹಿಸದ್ದರಿಂದ ಈ ವಿಷಯದಲ್ಲಿ ತನಗೆ ಯಾವ ಅಭಿಪ್ರಾಯವನ್ನು ಕೊಡಲಿಕ್ಕಾಗುವುದಿಲ್ಲವೆಂದು ಮೆ. ಬಿ. ಎ. ಬೆಳ್ಯಪ್ಪನವರು ಸೂಚಿಸಿದರು.

ಮೆ. ಐ. ಪಿ. ಕಾರ್ಯಪ್ಪನವರ ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಠರಾವು ಪಾಸಾಯಿತು.

9. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸ್ಯೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿಕ ಕನ್‌ವೀನರರವರು, ಸದರಿಯವರೆ ಹೆಸ್ಸರ್ತಿನಲ್ಲಿ ಬ್ಯಾಂಕಿನಲ್ಲಿರುವ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟು ಮೊಬಲಗನ್ನು ಇನ್ಸ್ಯೂರೆನ್ಸ್ ಸೊಸೈಟಿಗೆ ಪಾವತಿ ಮಾಡುವ ವಿಷಯದಲ್ಲಿ ಬರೆದ ರಿಪೋರ್ಟನ್ನು ತಾ. 3-12-38 ರಲ್ಲಿ ಆಲೋಚಿಸುವಂತೆ ತೀರ್ಮಾನವಾಯಿತು.

10. ಕುಂಜಲಗೇರಿ ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ಪಾಯಿದೆ ಮೀರಿದ ಸಾಲಕ್ಕೆ ಸಮಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

11. ಚೆಂಬೆಬೆಳಿಯೂರು ಸೊಸೈಟಿಯವರು ಸಂಯೋಜಿತವಾದ ತಮ್ಮ (ಗ್ರಾಮದ 3 ಸಂಘಗಳಿಂದ ಬ್ಯಾಂಕಿಗೆ ಬರಬೇಕಾದ ಜುಮ್ಲ ಸಾಲಗಳಿಗೆ ಹೊಸ್ತಾಗಿ 8 ಕಂತುಗಳನ್ನು ಕೊಡಿಸಿ ಹೊಸ ಕರಾರು ಬರೆಸಿಕೊಳ್ಳಬೇಕೆಂಬ ವಿಷಯ ಇನ್ನೊಂದು ಮೀಟಿಂಗಿಗೆ ಇಡಲಾಯಿತು.

12. ಬ್ಯಾಂಕಿನ ಗೌರವ ಕಾರ್ಯದರ್ಶಿಯರಾದ ಮೆ. ಪಿ. ಜಿ. ಐಯ್ಯಪ್ಪನವರು ಬೈಲಾ ಪ್ರಕಾರ ತನಗೆ ಮರ್ಯಾದೆ ಧನ ಕೊಡಬೇಕೆಂದು ಬರಕೊಂಡ ಪತ್ರವನ್ನು ಆಲೋಚಿಸಲಾಯಿತು.

ಸದರಿಯವರು ಮಾಡಿದ ಕೆಲಸಕ್ಕಾಗಿ 300 ರೂಪಾಯಿ ಬೋನಸ್ಸು ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಕೊಡಬಹುದೆಂದು ತೀರ್ಮಾನವಾಯಿತು. ಮೆ. ಬಿ. ಎ. ಬೆಳ್ಯಪ್ಪನವರು ಇವಕ್ಕೆ ವಿರೋಧಿಸಿದರು.

13. ಕಾನೂರು ಮತ್ತು ಕೋಣೂರು ಗ್ರಾಮಸ್ಥರು ದನಗಳ ಪ್ರದರ್ಶನಕ್ಕಾಗಿ ಬ್ಯಾಂಕಿನಿಂದ 100 ರೂಪಾಯಿ ಧನ ಸಹಾಯ ಮಾಡಬೇಕೆಂದು ಬರಕೊಂಡ ಅರ್ಜಿಯನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

14. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸ್ಯೂರೆನ್ಸ್ ಸೊಸೈಟಿಯಲ್ಲಿ ಬ್ಯಾಂಕು ಪಡಕೊಂಡ 250 ರೂಪಾಯಿ ಶೇರು ಮೊಬಲಗನ್ನು ಸದರಿ ಸೊಸೈಟಿಗೆ ಕೊಡಗು ಲೋಕಲ್ ಬೋರ್ಡಿನಿಂದ ಸಲ್ಲಬೇಕಾದ ಸೇವಿಂಗ್ಸ್ ಬ್ಯಾಂಕು ಹಣದ ಒಂದು ಭಾಗ ಸಲ್ಕೆಗಾಗಿ ಹೊಂದಿಕೊಂಡಿದ್ದೇವೆಂತಲೂ ಉಳಿದ ಹಣವನ್ನು ಆದಷ್ಟು ಬೇಗನೆ ಕಳುಹಿಸಬೇಕೆಂತ ವಗೈರೆಯಾಗಿ ಸದರಿ ಇನ್ಸ್ಯೂರೆನ್ಸ್ ಸೊಸೈಟಿಯು ಬರಕೊಂಡ ಪತ್ರ ಮತ್ತು ಅದಕ್ಕೆ ಪರವಾಗಿ ಮೆ. ಟಿ. ಕುಮಾರಸ್ವಾಮಿ ಅಡ್ವೊಕೇಟರಿಂದ ಬಂದ ಪತ್ರವನ್ನು ಸಹ ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

15. ಕೊಡಗಿನ ಬರುವ ಸಹಕಾರ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬರಲು ತನಗೆ ಅನಾನುಕೂಲವೆಂದು ಪುತ್ತೂರಿನ ಅಡ್ವೊಕೇಟರಾದ ಮೆ. ಯಂ. ಶಿವರಾಯರು ಬರೆದ ಪತ್ರವನ್ನು ಓದಲಾಯಿತು.

ಸದರಿ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬರಬೇಕೆಂದು ಮೈಸೂರಿನ ರಿಟಯರ್ಡ್ ಅಗ್ರಿಕಲ್ಚರಲ್ ಡೈರೆಕ್ಟರಾದ ಮೆ. ಎ. ಕೆ. ಯಜ್ಞನಾರಾಯಣ ಯಂ. ಎ. ಡಿಪ್ಲೊಮ ಆಫ್ ಅಗ್ರಿಕಲ್ಚರ್ ಎನ್. ಡಿ. ಡಿ. (ಇಂಗ್ಲೆಂಡ್) ಇವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

16. ಮೆ. ಯಂ. ಯಂ. ಬೆಳ್ಯಪ್ಪನವರು ತಾನು ಬ್ಯಾಂಕಿನಲ್ಲಿ ಕಳೆದ ವರ್ಷ ಗೌರವ ಕಾರ್ಯದರ್ಶಿಯಾಗಿ ಕೆಲಸ ಮಾಡಿದಷ್ಟು ತಿಂಗಳುಗಳಿಗೆ ಸರಿಯಾಗಿ ಸಮಯಕ್ಕೆ ತನಗೆ ಸಲ್ಲತಕ್ಕ ಬೋನಸ್ಸು ಕೊಡಬೇಕೆಂದು ಬರಕೊಂಡ ಪತ್ರವನ್ನು ಜನರಲ್ ಬಾಡಿಯವರ ತೀರ್ಮಾನಕ್ಕೆ ಇಡಲಾಯಿತು.

17. ಬ್ಯಾಂಕಿನಲ್ಲಿ ಪ್ರತ್ಯೇಕ ಒಂದು ಶಾಖೆ ತೆರೆದು ದೀರ್ಘ ಕಂತಿನ ಸಾಲ ಕೊಡಲು ಏರ್ಪಾಡು ಮಾಡಲಿಕ್ಕಾಗಿ, ಸರಕಾರದವರ ಸಹಾಯ ಕೇಳಿಕೊಂಡು ಮೇರೆ, ನಮ್ಮ ತೋರಿಕೆಯನ್ನು ನೆರವೇರಿಸಲಿಕ್ಕಾಗುವುದಿಲ್ಲವೆಂದು ಕಮಿಷನ್ನರವರಿಂದ ಬಂದ ಪತ್ರವನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

18. ಹುತ್ರಿ ಸಾಲ ಮಂಜೂರ್ಮಾಡಲು ಒಂದು ಸಬ್ ಕಮಿಟಿಯನ್ನು ನೇಮು ಕೊಡಬೇಕೆಂದು ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರು ಬರಕೊಂಡ ಪತ್ರವನ್ನು ಇನ್ನೊಂದು ಮೀಟಿಂಗಿನಲ್ಲಿ ಆಲೋಚಿಸಲು ಇಡಲಾಯಿತು.

19. ಸೊಸೈಟಿಗಳಲ್ಲಿ ಈಗ ನಗದ್ದು ಹಣ (cash balance) ಕಡಿಮೆಯಾಗಿರುವುದರಿಂದ ಸಹಕಾರಿ ಸಮ್ಮೇಳನದ ಖರ್ಚನ್ನು ಬ್ಯಾಂಕೇ ನಡಿಸಿ ಅನಂತರ ಸೊಸೈಟಿಗಳಿಂದ ವಸೂಲ್ಮಾಡಬೇಕೆಂದು ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರು ಬರಕೊಂಡ ಪತ್ರವನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

20. ಬೇಗೂರು ಸೊಸೈಟಿಯವರು ತಮ್ಮ ಮೆಂಬರುಗಳಲ್ಲಿಬ್ಬರಿಗೆ ಸ್ಥಳ ಬಟವಾಡೆ ಮಾಡಲು ತಮ್ಮ ಸಾಲದ ಅರ್ಜಿಯಲ್ಲು ನಮೂದಿಸಿರುವ ಮೊಬಲಗಿನ ಪೈಕಿ ಬ್ಯಾಂಕಿನಿಂದ 3000 ರೂಪಾಯಿ ಸಾಲ ಮಂಜೂರ್ಮಾಡಿಸಿ ಕೊಡಬೇಕೆಂದು ಬರಕೊಂಡ ಪತ್ರವನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

21. ಬ್ಯಾಂಕಿನ ಉಪಯೋಗಕ್ಕಿರುವ ಒಂದು ಮೇಜಕ್ಕೆ ತಗಲುವ ಖರ್ಚನ್ನು ಮಂಜೂರ್ಮಾಡಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

22. ಒಬ್ಬ ಮಹನೀಯಳು ತನ್ನ ಮತ್ತು ಇನ್ನೊಬ್ಬ ಮಹನೀಯರ ಒಂಟಿ ಹೆಸರಿನಲ್ಲಿರತಕ್ಕ ಸೇವಿಂಗ್ಸ್ ಮತ್ತು ನಿರಖು ಠೇವಣಾತಿ ಮೊಬಲಗುಗಳನ್ನು ಪೂರ್ತಿಯಾಗಿ ತನ್ನ ಹೆಸರಿಗೆ ವೆರ್ಗಾಯಿಸಬೇಕೆಂದು ಬರಕೊಂಡ ಪತ್ರವನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

23. ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಮಲೆದೇವರ ಹಣವನ್ನು ಅಲ್ಲಿನ ನಾಡು ಜನರು ತೀರ್ಮಾನಮಾಡಿಕೊಳ್ಳುವ ತನಕ ಯಾರ ಹೆಸರಿಗೂ ವರ್ಗಾಯಿಸಕೂಡದೆಂದು ವಕೀಲರಾದ ಮೆ. ಎಸ್. ರಾಮಯ್ಯನವರಿಂದ ಬಂದ ರಿಜಿಸ್ಟರ್ಡ್ ನೋಟೀಸನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

24. ಈ ಕೆಳಗಿನ ಸೊಸೈಟಿಗೆ ಅವುಗಳ ಸಾಲದ ಅರ್ಜಿ ನೇರೆ ಹುತ್ರಿ ಸಾಲ ಮಂಜೂರ್ಮಾಡಲಾಯಿತು.

1. ತಾವಳಗೇರಿ ಸೊಸೈಟಿಗೆ ರೂ. 50, 2. ಕೊಳತಡಬೈಗೋಡು ಸೊಸೈಟಿಗೆ ರೂ. 250, 3. ಬಾಳುಗೋಡು ಸೊಸೈಟಿಗೆ ರೂ. 300, 4. ಬ್ಲಾಡಗ (ವೀರಾಜಪೇಟೆ) ಸೊಸೈಟಿಗೆ ರೂ. 200, (5) ಬಟ್ಟಂಗಾಲ ಸೊಸೈಟಿಗೆ 300, 6. ಹೈಸೊಡ್ಲೂರು ಸೊಸೈಟಿಗೆ ರೂ. 200, 7. ಚಿಕ್ಕಮುಂಡೂರು ಸೊಸೈಟಿಗೆ ರೂ. 150, 8. ಮಗ್ಗುಲ ಸೊಸೈಟಿಗೆ ರೂ. 150, 9. ಕೋಣಗೇರಿ ಸೊಸೈಟಿಗೆ ರೂ. 200, 10. ಹುದಿಕೇರಿ ಸೊಸೈಟಿಗೆ ರೂ. 100, 11. ತೂಚಮಕೇರಿ ಸೊಸೈಟಿಗೆ ರೂ. 100, 12. ಅತ್ತೂರು ಸೊಸೈಟಿಗೆ ರೂ. 150, 13. ಆರ್ಜಸೊಸೈಟಿಗೆ ರೂ. 300 ಮತ್ತು 14. ಬೈರಂಬಾಡ ಸೊಸೈಟಿಗೆ ರೂ. 150.

25. ಅಂಕನಳ್ಳಿ ಸೊಸೈಟಿಯವರು ತಮಗೆ ಮಂಜೂರಾದ ಸಾಲದ ಬಾಕಿ 200 ರೂಪಾಯಿಗಳನ್ನು ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

26. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರಕೊಂಡ ಮೆ. ಗಳಾದ ಐನಂಡ ಕಾರ್ಯಪ್ಪನವರನ್ನು ಮತ್ತು ಅಜ್ಜಿಕುಟ್ಟಿರ ಪೊನ್ನಪ್ಪನವರನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52–24 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಆಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಇನ್ನಾ ದರಣೆಯನ್ನೂ, ಸ್ಥಾಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ [illegible] ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 3,02,02,000.

ಎಂಡೋಮೆಂಟ್ ವಿಮಾ ಪತ್ರ[illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2[illegible]ರಂತೆಯೂ ಬೋನಸ್ಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52–39

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೮೯೫

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕ.
ಮುತ್ತು ಕಂಪೆನಿ,
(52–52) ಗರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯುವೆಂತಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.
ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.
ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮೂದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮೂದಪ್ಪನವರು ಮತ್ತು ಮೆ. ಜಿ: ಮೂದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೂಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪ್ರಭಪ್ಪನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

21 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲ್ಯದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುರಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,800	0	0
ಜಮೂಬಂದ ಠೇವಣಾತಿ	– 2,44,140	6	4
ವಸೂಲಾದ ಕ್ಷೇಮನಿಧಿ	– 1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 16,753	1	11
ತ್ರಿಪ್ಟ್ ಡಿಪಾಜಿಟ್ಟು	– 35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮೂಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:-ಜೌರೀರ ಎ. ಮುದ್ದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:-ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

52-48

Printed & Published by P. I. Belliappa, at 'Kodagu' Press Mercara for 'Kodagu' Ltd.